ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇದು ಬಹಳ ಆಗುತ್ತದೆ. ಆದುದರಿಂದ ಇದಕ್ಕೆ ಒಂದು ಸರ್ಕ್ಯುಲರ್ ಕಳುಹಿಸುವುದು ಉತ್ತಮ ಎಂದು ನಾನು ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದು ರಾಜ್ಯದ ಯಾವ ಭಾಗದಲ್ಲೇ ನಡೆಯಲಿ ಈಗಾಗಲೇ ನಾವು ಒಂದು ಸರ್ಕ್ಯುಲರನ್ನು ಕಳುಹಿಸಿದ್ದೇವೆ. ಎಲ್ಲೆಲ್ಲಿ ನಿಷ್ಕಾರಣವಾಗಿ ಗೇಣಿದಾರನ್ನು ಹೊರ ಹಾಕಿದ್ದಾರೆ ಅದನ್ನು ಡೆಪ್ಯೂಟಿ ಕಮೀಷನರ್‌ರವರೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿ ಕೂಡಲೇ ಅಲ್ಲಿನ ವಿಲೇಜ್ ಅಕೌಂಟೆಂಟ್‌ರ ಮೇಲೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮತ್ತೆ ಅವನು ಅದೇ ಭೂಮಿಗೆ ಅಂಟಿಕೊಂಡಿರುವಂತೆ ಏರ್ಪಾಡು ಮಾಡಬೇಕೆಂದು ನಾನು ತಿಳಿಸಿದ್ದೇನೆ. ಮತ್ತೆ ಬೇಕಾದರೆ ಇದಕ್ಕೆ ಇನ್ನೊಂದು ಸರ್ಕ್ಯುಲರನ್ನು ಕಳುಹಿಸಿಕೊಡುತ್ತೇನೆ.

Allotment of Sites to Members of Legislature by the CITB.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರೇ, ನಾನು ಹಿಂದೆಯೂ ಕೂಡ ಈ ಪ್ರಶ್ನೆ ಕೇಳಿದ್ದೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ ಎಂದು ನನ್ನ ಅಭಿಪ್ರಾಯ. ಅದೇನೆಂದರೆ ಈಗ ಇರತಕ್ಕಂಥ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಟ್ರಸ್ಟ್ ಬೋರ್ಡ್ ಸೈಟುಗಳನ್ನು ಏನು ಕೊಟ್ಟಿದ್ದಾರೋ ಅದರ ವಿವರಣೆಯನ್ನು ಕೊಡಿ ಎಂದು. ಬಹುಶಃ [illegible] ದಿಂದಿಗೆ ಕೊಟ್ಟಿರಬಹುದು. ಅವರು ಯಾವಾಗ ಅರ್ಜಿ ಹಾಕಿದರು, ಯಾವಾಗ ಕೊಟ್ಟರಿ ಎನ್ನುವ ವಿವರಗಳನ್ನು ಇನ್ನು ೨—೩ ದಿವಸದೊಳಗೆ ಈ ಸದನ ಮುಗಿಯುವುದರೊಳಗೆ ತರಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ ಆರ್. ಶಾಮಣ್ಣ.—ಅಧ್ಯಕ್ಷರೇ, ನಾನೂ ಕೂಡ ಅದೇ ಪ್ರಶ್ನೆಯ ಸಂಬಂಧವಾಗಿ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಈ ಎರಡಕ್ಕೂ ಉತ್ತರವನ್ನು ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI B. BASAVALINGAPPA.—I would like to know whether the names of all those persons in whose favour 9,500 sites have been given is to be furnished.

SRI K. M. NAGANNA.—I would like to know the names of the Legislators who have been allotted the sites.

ಶ್ರೀ ಬಸವಲಿಂಗಪ್ಪ.—ಪಟ್ಟಿಯನ್ನು ಕೊಡುತ್ತೇನೆ.

Scarcity of drinking water in Kolar Taluk

ಶ್ರೀ ಸಿ. ಬೈರೇಗೌಡ (ಬೇಮಗಲ್).—ಅಧ್ಯಕ್ಷರೇ, ಈ ಬಗ್ಗೆ ನಾನು ಒಂದು ತಿಂಗಳ ಹಿಂದೆಯೇ ಪ್ರಶ್ನೆ ಕಳುಹಿಸಿದ್ದೆ. ಇದುವರೆಗೂ ಉತ್ತರ ಬರಲಿಲ್ಲ. ನಮ್ಮ ಕೋಲಾರದ ತಾಲ್ಲೂಕಿನಲ್ಲಿ ಸುಮಾರು ೮೦ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ಅಲ್ಲಿ ನೀರಿನ ಬಹಳ ಸ್ಕೇರ್ಸಿಟಿ ಇರುವುದರಿಂದ ಆ ಬಗ್ಗೆ ಪ್ರಶ್ನೆ ಕಳುಹಿಸಿದ್ದೇನೆ.

ಅಧ್ಯಕ್ಷರು.—ಆ ಬಗ್ಗೆ ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿ, ನೋಡುತ್ತೇನೆ.

Scarcity of Silkworm Eggs

ಶ್ರೀ ಸಿ. ಬೈರೆಗೌಡ.—ಇನ್ನೊಂದು ಪ್ರಾಮುಖ್ಯವಾದ ವಿಷಯ ಏನೆಂದರೆ ರೇಷ್ಮೆ ಮೊಟ್ಟೆಗೆ ಈಗ ಅಭಾವ ಬಂದಿದೆ. ಮೊದಲು ೧೦೦ಕ್ಕೆ ೧೦—೧೫ ರೂಪಾಯಿ ಇದ್ದದ್ದು ಈಗ ೨೫—೩೦ ರೂಪಾಯಿಗೆ ಮಾರಾಟವಾಗುತ್ತಾ ಇದೆ. ಈಗ ವೀಮಯೀಣ್ಣ, ಸಿಮೆಂಟ್ ಮತ್ತು ಗೊಬ್ಬರಕ್ಕೆ ಏನು ಅಭಾವ ಬಂದಿದೆಯೋ ಅದೇ ರೀತಿ ರೇಷ್ಮೆ ಮೊಟ್ಟೆಗೂ ಅಭಾವ ಬಂದಿದೆ. ಈ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ಕಳುಹಿಸಿದ್ದೇನೆ, ಇನ್ನೂ ಉತ್ತರ ಬಂದಿಲ್ಲ.